Adde

ಯುವಕ ವರ್ಷದ ನಿಮಿತ್ತ :

# ತಾರುಣ್ಯದ ಸಮಸ್ಯೆ

— ಡಾ. ಮಾ. ಕೃ. ವೈದ್ಯ

## ಯುವಕ ವರ್ಷದ ಸಲುವಾಗಿ ನೂಲಿಕೆ

೧. ಭಾರತೀಯ ತರುಣನೇ ಜಾಗೃತನಾಗು
೨. ಮನೋರಂಜನೆ ಮತ್ತು ಮನುಷ್ಯ
೩. ಜನರೇಷನ್ ಗ್ಯಾಪ
೪. ಒಂದು ಹೊಸ ಸೃಷ್ಟಿ ಮತ್ತು ಹೊಸ ದೃಷ್ಟಿ
೫. ಒಂದು ಅಮೂಲ್ಯ ಉದಾಹರಣೆ – ಪತನ ಆದ ಜಪಾನ
೬. ಒಂದು ಹಿಂದಿನ ನೆನಪು ಮತ್ತು ಪಾಠ
೭. ಒಂದು ಸ್ಫೂರ್ತಿಕಥೆ ಡಿವ್‌ಫಿಬಾಯಿಯದು
೮. ಒಂದು ಭಯಂಕರ ಮತ್ತು ಸರ್ವಸ್ವನಾಶಕ ರೋಗ
೯. ತಂಬಾಕದ ಫಾಯದೆ
೧೦. ಆಧುನಿಕ ವ್ಯಕ್ತಿಸ್ವಾತಂತ್ರ್ಯದ ಮಹತ್ವ
೧೧. ಆಧುನಿನಿಕ ಪ್ರಜಾಸತ್ತೆ – ಒಂದು ಭಾರೀ ಮೋಸಗಾರಿಕೆ
೧೨. ತಾರುಣ್ಯದ ಸಮಸ್ಯೆಗಳು

Rs 2/00

# ಪ್ರಸ್ತಾವನೆ

ನನ್ನ ಪಾಲನೆಯಲ್ಲಿದ್ದ ಒಬ್ಬ ತರುಣನು ತಾರುಣ್ಯದ ಉನ್ಮಾದದ ಆವೇಶದಲ್ಲಿ ತನ್ನ ವಸತಿಗೃಹದಿಂದ ಒಂದು ವಿಚಿತ್ರವೆನಿಸುವ ಪತ್ರವನ್ನು ಬರೆದ. ಅದರಲ್ಲಿ ತಂದೆ-ತಾಯಿಗಳ ಹಿರಿಯರ ನಿಂದೆ ಇತ್ತು, ಅಪಕ್ವವಾದ ವಿಚಾರಗಳಿದ್ದವು, ಅಹಂ ಭಾವದ ಆವಿಷ್ಕಾರ ಒಳಗೊಂಡಿತ್ತು, ಮತ್ತು ಆಧುನಿಕ ಉಚ್ಚ ಶಿಕ್ಷಣದ ಬಗ್ಗೆ ಆತ್ಮ ವಿಶ್ವಾಸ ವ್ಯಕ್ತಪಡಿಸಲಾಗಿತ್ತು.

ನನಗೆ ಅನೇಕ ತರುಣರ ಪರಿಚಯ, ನಿಕಟಸಂಪರ್ಕ ಕೂಡ ಇತ್ತು. ನನಗೆ ಈ ಪತ್ರದಿಂದ ವ್ಯಸನವಾಗಲೀ,ಬೇಜಾರವಾಗಲೀ ಆಗಲಿಲ್ಲ, ಪ್ರಯೋಗಶೀಲ ಮನಸ್ಸಿಗೊಂದು ವಿಷಯ ಸಿಕ್ಕಿತ್ತು.

ಆ ಪತ್ರದಲ್ಲಿಯ ವಿಷಯ, ಬಳಸಲಾದ ಭಾಷೆ, ಕುರಿತು ತಿಹ್ರಾಯಿತ ವ್ಯಕ್ತಿ, ಸುಶಿಕ್ಷಿತನಾದವ ಹಾಗೂ ನನ್ನ ಪಾಲನೆಯಲ್ಲಿ ಬೆಳೆದವನೆಂಬ ದೃಷ್ಟಿಯಿಂದ ಮತ್ತೆ ವಿಚಾರ ಮಾಡಿ ಹತ್ತು ಹನ್ನೆರಡು ದಿವಸಗಳ ನಂತರ ಅದೇ ವಿಷಯವನ್ನು ತೆಗೆದುಕೊಂಡು ಒಬ್ಬ ಸುಶಿಕ್ಷಿತ, ಸಚ್ಚಾರಿತ್ರ್ಯವಂತ ಹಾಗೂ ಸುವಿಚಾರಿಯಂತೆ ಮತ್ತೆ ಅದೇ ಪತ್ರ ಬರೆಯಬೇಕು, ಆಗ ಎರಡರ ನಡುವಿನ ವ್ಯತ್ಯಾಸ ನಿನಗೆಯೇ ಅರ್ಥವಾಗುತ್ತದೆಂದು ಆ ತರುಣನಿಗೆ ಉತ್ತರ ಬರೆದೆ.

ಆಗ ಅವನಿಂದ ಬಂದ ಉತ್ತರ ವಿಚಾರಮಾಡಿ ಬರೆದದ್ದಾಗಿತ್ತು ಮತ್ತು ವಿಚಾರಾರ್ಹವೂ ಇತ್ತು.

= ನಿಮ್ಮ ಪತ್ರ ತಲುಪಿತು ಮತ್ತು ವಿಚಾರ ಮಾಡಿದೆ

= ನಾವು ಸಮಬುದ್ಧಿ ಹಾಗೂ ಸಮವಯಸ್ಕ ತರುಣರು

= ತಂದೆ-ತಾಯಿ ಹಿರಿಯರಿಂದ ದೂರದಲ್ಲಿ ವಸತಿ ಗೃಹದಲ್ಲಿದ್ದು ಕಾಲೇಜಿನಲ್ಲಿ ಓದುತ್ತೇನೆ.

= ನಮ್ಮ ಬುದ್ಧಿ ಹಾಗೂ ಶಿಕ್ಷಣ ಸಮಪಾತಳಿಯ ಮೇಲಿರುವದರಿಂದ ನಾವು ಪರಸ್ಪರ ನಮ್ಮ ಬುದ್ಧಿವಂತಿಕೆ,ತಿಳುವಳಿಕೆ ಬಗ್ಗೆ ಚರ್ಚಿಸುತ್ತೇವೆ, ವಿಚಾರವಿಮರ್ಶೆ ಮಾಡುತ್ತೇವೆ, ತುಲನೆ ಮಾಡುತ್ತೇವೆ.

= ಸಾಹಸೀ ವಿಚಾರ ಹಾಗೂ ಆಚಾರಗಳ ಬಗ್ಗೆ ಅಹಮಹಮಿಕೆಯು ಉತ್ಸಾಹವವೇರುತ್ತದೆ

= ಮತ್ತು ಅವರ ಪರಿಣಾಮ ನಮ್ಮ ವಿಚಾರ ಹಾಗೂ ಆಚಾರಗಳ ಮೇಲೂ ಆಗುತ್ತಿರುತ್ತದೆ

= ನಿಮ್ಮ ಪತ್ರದಿಂದಲೇ ನನ್ನ ಕಣ್ಣು ತೆರೆದವು. ಕಣ್ಣುಗಳು ತೆರೆದದ್ದ ರಿಂದ ತಮ್ಮಲ್ಲೊಂದು ವಿನಂತಿ

= ಇನ್ನು ಮುಂದೆ ಮುಂದಿನ ಪರಿಸ್ಥಿತಿ ಲಕ್ಷಕ್ಕೆ ತಂದುಕೊಂಡು ನಾನು ಏನಾದರೂ, ಎಲ್ಲಿಯಾದರೂ ತಪ್ಪುಮಾಡಿದ್ದಾವರೆ ನನ್ನನ್ನು ಸ್ವಲ್ಪವೂ ಮರೆಯದೇ ಅಲಕ್ಷಿಸದೇ ಸುಧಾರಿಸಿ ಸರಿಯಾದ ಮಾರ್ಗ ತೋರಿಸಬೇಕು

ಮತ್ತು ಅದೇ ತರುಣ ಮುಂದೆ ಒಳ್ಳೇ ಕರ್ತೃತ್ವಶಾಲಿ, ಸೇವಾಧರ್ಮನಿರತ ಹಾಗೂ ಪ್ರತಿಷ್ಠಿತ ವ್ಯಕ್ತಿಯೆನಿಸಿದ

ವಿಚಾರಪೂರ್ವಕವಾಗಿ ಅವನು ಬರೆದಿರುವಂತೆಯೇ ಆಧುನಿಕ ತರುಣ-ತರುಣಿಯರು ಸಮವಯಸ್ಕ, ಸಮಬುದ್ಧಿ, ತಿಳುವಳಿಕೆ ಕಮ್ಮಿಯಿರುವವರು ಪರಸ್ಪರ ಸ್ನೇಹ, ಒಂದೇ ವಿಚಾರ, ಆಚಾರದಿಂದ ಸಮ್ಮಿಲಿತರಾಗಿರುತ್ತಾರೆಂಬುದು ನಿಜ.

ಶಾಲೆ-ಕಾಲೇಜುಗಳಲ್ಲಿ ವ್ಯಾಸಂಗಮಾಡುವವರಿಗೆ ಅವರಲ್ಲೂ ಆಧುನಿಕ ವಸತಿ ಗೃಹಗಳಲ್ಲಿರುವವರಿಗೆ ಅಥವಾ ಆಧುನಿಕ ಕುಟುಂಬ ವ್ಯವಸ್ಥೆಗೊಳಪಟ್ಟಂಥ ತರುಣರಿಗೆ ತಮಗಿಂತ ಹೆಚ್ಚು ಪರಿಪಕ್ವ ಬುದ್ಧಿಯಿರುವ ಜನರೊಂದಿಗೆ ಸ್ನೇಹಸಂಬಂಧ ಬೆಳೆಯುವುದೇ ಕಠಿಣವಾಗತೊಡಗಿವೆ.

ಯಾಕಂದರೆ ಪ್ರೌಢರಾದವರನ್ನು, ವೃದ್ಧರನ್ನು ಮನೆಯಲ್ಲಿರಗೊಡುವುದಿಲ್ಲ.

ತಾಯಿ-ತಂದೆ ಹಾಗೂ ಮಕ್ಕಳು ದಿನವಿಡೀ ಹೊರಗೇ ಇರುತ್ತಾರೆ.

ಬಾಹ್ಯ ವಾತಾವರಣ ಸಮಬುದ್ಧಿಯು ಹಾಗೂ ಕಡಿಮೆ ತಿಳುವಳಿಕೆಯುದೇ ಅಥವಾ ದುಷ್ಟಬುದ್ಧಿಯೇ ಸ್ವಲ್ಪ ಜಾಸ್ತಿ. ಹೀಗಾಗಿ ದುಷ್ಟಬುದ್ಧಿಯು ಮಕ್ಕಳನ್ನು ದುರ್ಮಾರ್ಗಕ್ಕೆ ಒಯ್ಯುತ್ತದೆ

"ಎಂಥ ಅನ್ನ ಸೇವನೆಯಾಗುತ್ತೋ ಅಂಥದೇ ಪ್ರಜೆಗಳಾಗುತ್ತಾರೆ" ಎಂಬ ಉಕ್ತಿ ಪ್ರತ್ಯಕ್ಷ ಆಚರಣೆಗೆ ಬರುತ್ತದೆ.

ಏನೇ ಅಂದರೂ ನಡುನಡುವೆ ಕೆಲ ಉಚ್ಚ ವಿಚಾರ ಮತ್ತು ಜನರೊಂದಿಗೆ ಅವರ ಸಂಪರ್ಕವುಂಟಾಗುತ್ತದೆ. ಆದರೆ ಅದು ಹೆಚ್ಚೆಂದರೆ ಒಂದೆರಡು ಗಂಟೆಮಟ್ಟಿಗೆ

ಮಾತ್ರ, ಕಲಿಸುವ ಶಿಕ್ಷಕರೊಡನೆ ಮತ್ತು ಯಾವುದೊಂದು ಪುಸ್ತಕದ ಅಧ್ಯಯನದ ಮಟ್ಟಿಗೆ. ಅದುಕೂಡ ಪರೀಕ್ಷೆಯನ್ನು ಪಾಸುಮಾಡುವ ಮಟ್ಟಿಗೆ, ಪುಸ್ತಕೀ ಜ್ಞಾನ ಮಟ್ಟಿಗೆ ಎಂದರೂ ನಡೆಯುತ್ತದೆ.

ಇಂದಿನ ಶಿಕ್ಷಕರೂ ಅದೇ ರೀತಿಯವರೇ. ಬಹಳಷ್ಟು ಸಂದರ್ಭಗಳಲ್ಲಿ ಅವರೂ ಕುಮಾರ್ಗಿಗಳೇ ಇರುವವರಿಂದ ಈ ಮಕ್ಕಳಿಗೆ, ತರುಣರಿಗೆ ಪರಿಪಕ್ವತೆ ಬರುವ ಅವ ಕಾಶವೇ ಸಿಗದಂತಾಗಿದೆ.

ಹೀಗಿರುವುದರಿಂದಲೇ ಅತ್ಯಮೌಲ್ಯವಾದ ಮನುಷ್ಯನು ಜನ್ಮದ–ಆಯುಷ್ಯದ, ಕುಟುಂಬದ, ಸಮಾಜದ ಹಾಗೂ ದೇಶದ ಸರ್ವ ವಿದ್ಯಮಾನಗಳು ಅಪಕ್ವತೆಯ ಅಧ್ಯಯನದಿಂದಲೇ ನಡೆಯಬೇಕಾದುದು ಅನಿವಾರ್ಯವೆನಿಸಿದೆ.

ತಾರುಣ್ಯದ ಆಯುಷ್ಯವೆಲ್ಲಷ್ಟೂ ಹೀಗೆ ಅಪಕ್ವತೆಯಲ್ಲೇ ಸರಳವಾಗಿ ಗತಿಸುತ್ತ ವೃದ್ಧಾಪ್ಯವನ್ನು ತಲುಪತೊಡಗಿದೆ. ಆದ್ದರಿಂದ ನನ್ನ ಪಾಲನೆಯಲ್ಲಿಯ ಮೇಲ್ಕಾಣಿಸಿದ ತರುಣನು ಪೂರ್ಣ ವಿಚಾರಮಾಡಿ ತನಗೆ ದಾರಿ ಕಂಡುಕೊಂಡಿದ್ದಲ್ಲದೇ ನನಗೂ ಒಂದು ಮಾರ್ಗದರ್ಶನ ಮಾಡಿದ್ದಾನೆ. ಅದೇ ಮಾರ್ಗದ ಮೇಲೆ ಜಗತ್ತಿನ ವಿದ್ಯಮಾನಗಳು ನಡೆದಿರುವವನ್ನು ಕಾಣುತ್ತೇವೆ.

ಅದರಿಂದಾಗಿ ಇಡೀ ಜಗತ್ತೇ ದುಃಖಮಯವಾಗಿ ಕಂಗೊಳಿಸುತ್ತದೆ.

ಕರ್ಮಧರ್ಮಸಂಯೋಗದಿಂದ ನನಗೆ ಚಿಕ್ಕಂದಿನಿಂದಲೇ ಒಂದು ಪ್ರತ್ಯೇಕವಾದ ಮಾರ್ಗ ಲಭಿಸಿದೆ. ಕೆಲವರಿಗೆ ಈ ಉದಾಹರಣೆಯು ಕದಾಚಿತ್ ಉಪಯುಕ್ತವೆನಿಸೀತು.

ಕಾಡಿನಲ್ಲೇ ಜನ್ಮ ಮತ್ತು ಮನೆಯಲ್ಲೇ ೨೪ ಗಂಟೆ ೧೨ ತಿಂಗಳೂ ವಾಸ್ತವ್ಯ.

ಹಗಲಿರುಳೂ ತಂದೆ-ತಾಯಿಯ ನಿಕಟ ಆತ್ಮೀಯ ಸಂಪರ್ಕ.

ಮತ್ತು ಅವರು ಸುಶೀಲ, ಕಷ್ಟಸಹಿಷ್ಣು, ಪ್ರೇಮಮಯ, ಸೇವಾಧರ್ಮ ನಿರತರು, ಧಾರ್ಮಿಕ ಹಾಗೂ ವಿಚಾರವಂತರು. ಅವರ ಮಾದರಿಯ ಜೀವನ ನನ್ನ ಬಾಲ ಮನಸ್ಸಿನ ಮೇಲೆ ಶಾಶ್ವತ ಪರಿಣಾಮ ಬೀರಿರಬಹುದು. ಅಂಥ ವಾತಾವರಣ ಶ್ರೇಷ್ಠವಾದ ಪರಂಪರೆಯಲ್ಲಿ ಜನಿಸಿ ಬೆಳೆದು ಬಂದುದರಿಂದ ಹಾಗೂ ಅಂಥ ಆತ್ಮೀಯ ಸಂಪರ್ಕ ವಾತಾವರಣದಿಂದಾಗಿ ಹೊರಗಿನ ಬೇರೆ ಅನಿಷ್ಟ ಸಂಸ್ಕಾರಗಳ ಮೂಲಕ ಅನಿಷ್ಟ ಪರಿಣಾಮಗಳು ನನ್ನ ಮೇಲೆ ಆಗಲು ಅವಕಾಶವೇ ಇರಲಿಲ್ಲ.

ಇದರಿಂದಾಗಿಯೇ ನಂತರದ ಆಯುಷ್ಯದಲ್ಲಿಯೂ ವಯಸ್ಕರರ ಸ್ನೇಹ ಸಂಪರ್ಕವೇ ನನಗೆ ಹೆಚ್ಚೆಚ್ಚು ಮೆಚ್ಚಿಕೆಯದೆನಿಸಿ ಅದರಲ್ಲೂ ಪ್ರೌಢ ಹಾಗೂ ಅಪ್ರೌಢ ಹೇಗಿರುವರು ಎಂಬುದು ತಿಳಿಯಹತ್ತಿತು.

ಅದರಲ್ಲಿಯ ಒಳ್ಳೇ ಆಚಾರ-ವಿಚಾರ ತಿಳಿಯಹತ್ತಿದವು. ತರುಣ ಮಿತ್ರರರ ವಿಚಾರ ಆಚಾರಗಳ ನಡುವಿನ ತಾರತಮ್ಯ ತಿಳಿಯಹತ್ತಿತು.

ಒಳ್ಳೆಯದು–ಕೆಟ್ಟದ್ದು, ಯೋಗ್ಯ–ಅಯೋಗ್ಯ, ಉಪಯುಕ್ತ-ಅನುಪಯುಕ್ತ ಇವುಗಳ ತುಲನೆ ಪುನಃ ಪುನಃ ಮನಸ್ಸಿನಲ್ಲಿ ನಡೆಯಹತ್ತಿತು. ಪ್ರತಿಯೊಂದು ವಿಚಾರ ತುಲನೆ, ಕಾರ್ಯ ಇವುಗಳನ್ನು ಉತ್ತಮ, ಮಧ್ಯಮ, ಕನಿಷ್ಠ ಹೀಗೆ ಪರೀಕ್ಷೆಯ ಒರೆಗಲ್ಲಿಗೆ ಹಚ್ಚಿ ಗ್ರಾಹ್ಯ ಅಗ್ರಾಹ್ಯ ಯಾವುದು ಎಂಬುದನ್ನು ನಿರ್ಧರಿಸುವ ರೂಢಿ ತಾನಾಗಿಯೇ ಬೆಳೆದುಬಂತು.

ಮತ್ತು ಜೀವನಕ್ಕೆ ಒಂದು ವಿಶಿಷ್ಟವಾದ ಮಾರ್ಗವೇ ಸಿಕ್ಕುತ್ತ ನಡೆಯಿತು.

ತಾರುಣ್ಯದ ಬಹಳಷ್ಟು ಗುಣಧರ್ಮಗಳು ಮನಸ್ಸಿನಲ್ಲಿಯೇ ಸತತ ಚಿಂತನೆಯಿಂದ, ಪ್ರಯೋಗದಿಂದ ರೂಪುಗೊಳ್ಳಹತ್ತಿದವು.

ಇತರ ತರುಣರಂತೆ ಅವಿಚಾರದಿಂದ ಆವಿಷ್ಕೃತವಾಗುವ ಅವಕಾಶವೇ ಪ್ರಾಪ್ತವಾಗದಿದ್ದುದರಿಂದ ಮೊದಲಿನಿಂದಲೇ ಅವಿಚಾರಗಳ ವೈಫಲ್ಯ, ನಿರುಪಯುಕ್ತತೆ ತಿಳಿಯತೊಡಗಿ ಅವುಗಳ ತ್ಯಾಗ ನಡೆಯಿತು. ಮತ್ತು ಅದರಿಂದಾಗಿಯೇ ನನಗೆ ಪ್ರೌಢತ್ವ ಬೇಗನೆ ಪ್ರಾಪ್ತವಾಗಿ ಕ್ರಮೇಣ ಬೆಳೆಯುತ್ತಲೂ ನಡೆಯಿತು.

ವೃದ್ಧಾಪ್ಯವಿನ್ನೂ ಬಂದಂತನಿಸುತ್ತಿಲ್ಲ. ಮತ್ತು ಅದು ನನ್ನಿಂದ ದೂರ ಬಹು ದೂರ ಸರಿಯತೊಡಗಿದೆ.

ಆಧುನಿಕ ಜ್ಞಾನದ ಅನೇಕ ವಿಭಿನ್ನ ಶಾಖೆಗಳಿಂದಾಗಿ, ಆಧುನಿಕ ಜ್ಞಾನಿ ಜನರ ಪ್ರಭಾವದಿಂದಾಗಿ ಮತ್ತು ಅಂಥ ಪ್ರಗತಿಯ ಪ್ರತ್ಯಕ್ಷ ಅನುಭವ ಮತ್ತು ಉಪಯೋಗದಿಂದಾಗಿ ನನ್ನ ಜೀವಿತದ ಪ್ರಯೋಗವು ಸಾಧಿಸಿದಂತಾಗಿದೆ. ಅದು ಬೆಳೆಯುತ್ತಲೂ ಇದೆ.

ಅದರ ನಿಷ್ಕರ್ಷವು ಸುವಿಚಾರದ ತರುಣರಿಗೆ ಹಾಗೂ ವಯಸ್ಕರಿಗೆ ಪ್ರಯೋಜನಕಾರಿಯೆನಿಸಬಹುದೆಂದು ಯುವಕ ವರ್ಷವನ್ನು ನಿಮಿತ್ತವಾಗಿಸಿಕೊಂಡು ಈ ವಿಚಾರಮಾಲಿಕೆ ಬರೆಯಲಾಗಿದೆ. ಮತ್ತು ಈ ಲೇಖನಗಳಿಂದಲೇ ಯುವಕ ವರ್ಷವೂ ಸಮಾಪ್ತಿಗೊಳ್ಳುವದೆಂದೆನಿಸುತ್ತದೆ.

— ಡಾ. ಮಾ. ಕೃ. ವೈದ್ಯ

ಯುವಕ ವರ್ಷದ ನಿಮಿತ್ತ

# ತಾರುಣ್ಯದ ಸಮಸ್ಯೆ....

೧. = ಹಿಂದೊಮ್ಮೆ ಗವ್ಹರ್ನರರೊಬ್ಬರು ಘಟಪ್ರಭಾ ಸ್ಟೇಶನ್ನಿನ ಮೇಲಿಂದ ಹಾಯ್ದು ಹೋಗುವವರಿದ್ದರು.

= ಅವರು ಹೋಗಬೇಕಿದ್ದ ಸಮಯ ಪ್ರಾತಃಕಾಲ.

= ಅವರಿಗೆ ಬೆಳಗಿನ ಉಪಾಹಾರ, ಚಹಾ ಕೊಡಲು ಸಕಲ ಸಿದ್ಧತೆಗಳಿಂದ ಹೋದೆವು.

= ಸ್ಟೇಶನ್ನಿನಲ್ಲಿ ಗಾಡಿಯು ಸಾಕಷ್ಟು ಸಮಯ ನಿಲ್ಲುವದಿತ್ತು. ಅಲ್ಲಿಯ ವೇಟಿಂಗರೂಮೂ ಉತ್ತಮವಾದುದು.

= ವೇಟಿಂಗರೂಮಿನೊಳಗೆಯೇ ಉಪಾಹಾರ ವ್ಯವಸ್ಥೆ ಚೆನ್ನಾಗಿ ಮಾಡುವಾ ಎಂದುಕೊಂಡು ಒಳಗೆ ನಡೆದೆವು.

= ಒಬ್ಬ ಖಾಕಿ ಸಮವಸ್ತ್ರಧಾರಿಯು ಹೊರಬೀಳುತ್ತಿದ್ದಾ.

= ಮತ್ತೆ ನಾವು ಒಳಗಡೆ ಹೊಕ್ಕು ನೋಡಿದಾಗ

= ಆ ವಿಶಾಲವಾದ ವೇಟಿಂಗರೂಮಿನ ಮಧ್ಯ ಒಂದು ದೊಡ್ಡದಾದ ದುಂಡು ಮೇಜು ಹಾಗೂ ಅದರ ಸುತ್ತ ಕೆಲವು ಖುರ್ಚಿಗಳಿರುವದು ಕಾಣಿಸಿತು.

= ಮತ್ತು ಅಲ್ಲಿ ಎಲ್ಲ ಕಡೆ ಕಸಕಡ್ಡಿ ಹರವಿದುದು ಕಂಡುಬಂತು.

= ಸುಟ್ಟುಹೋದ ಕೊರಿಚುಟ್ಟು, ಬೂದಿ ಹಾಗೂ ಕಡ್ಡಿಗಳ ಸಮೂಹವದು.

= ಹೀಗೆ ಚೆಲ್ಲಾಪಿಲ್ಲಿಯಾಗಿ ಬಿದ್ದ ಅವುಗಳ ಸಂಖ್ಯೆ ಕನಿಷ್ಟ ನಾಲ್ಕು ನೂರು.

oo oo oo oo

೨. = "ಇದೆಲ್ಲಾ ಏನು ? ಇಷ್ಟೊಂದು ಹೊಲಸೇಕೆ ಇಲ್ಲಿ ? " ಎಂದು ಆ ವ್ಯಕ್ತಿಗೆ ಪ್ರಶ್ನಿಸಿದೆ. ಆ ವ್ಯಕ್ತಿ ರೇಲ್ವೆ ಅಧಿಕಾರಿ ಎಂದು ಕಾಣಿಸುತ್ತಿದ್ದ.

= " ಏನಿಲ್ಲ, ನಿನ್ನೆ ರಾತ್ರಿ ನಾವು ಎಂಟು ಜನ ಇನ್‌ಸ್ಪೆಕ್ಟರರು ಇಲ್ಲಿಯೇ ಕೆಲಸದ ಮೇಲಿದ್ದೆವು. ಹೊತ್ತು ಹೋಗುವದಕ್ಕಾಗಿ ಇಸ್ಪೇಟ ಆಡುತ್ತ ಕುಳಿತಿದ್ದೆವು.

= ಎಷ್ಟೇ ಆದರೂ ನಾವೆಲ್ಲರೂ ತರುಣರೇ ತಾನೇ ?
= ಡಾಕ್ಟರ್ ಸಾಹೇಬ ದಯವಿಟ್ಟು ಕ್ಷಮಿಸಿ. ”
= ಎಂದಾತ ಉತ್ತರಿಸಿದ.

oo oo oo oo

೩. = ತಕ್ಷಣವೇ ಗಡಿಬಿಡಿಯಿಂದ ಇಡೀ ವೇಟಿಂಗ್‌ರೂಮನ್ನೆಲ್ಲ ಸ್ವಚ್ಛ ಗೊಳಿಸಿದೆವು.
= ಮತ್ತು ಗವ್ಹರ್ನರರಿಗೆ ಆತಿಥ್ಯ ನೀಡಿ ಕೆಲಸ ಪೂರೈಸಿದೆವು.
= ಆದರೆ ಈ ಘಟನೆಯಿಂದಾಗಿ ನನ್ನಲ್ಲೊಂದು ವಿಚಾರಗಳ ಸರಪಳಿ ಮೂಡಿತು.
= ತರುಣ ಹಾಗೂ ತಾರುಣ್ಯ ಇವುಗಳ ಅರ್ಥವೇನೆಂಬುದರ ಶೋಧನೆ ಯನ್ನು ನನ್ನ ಮನಸ್ಸು ಆರಂಭಿಸಿತು.
= ತರುಣ ಹಾಗೂ ತಾರುಣ್ಯದಿಂದಾಗಿ ಸದ್ಯ ನಡೆದಿರುವ ಅನರ್ಥ
= ತರುಣರು ಹಾಗೂ ಇತರ ವಯಸ್ಕರಿಂದ ಉದ್ಭೂತವಾಗುತ್ತಿರುವ ಸಮಸ್ಯೆ.
= ಮತ್ತು ಆತ್ಮಘಾತುಕ ಮತ್ತು ಸಮಾಜಘಾತುಕ, ಹಾಗೂ ಮಾನವ ವಿಧ್ವಂಸಕ ಚಾಳಿ

oo oo oo oo

೪. = ಮಾನವಜನ್ಮ ದುರ್ಲಭ ಮತ್ತು ಕಠಿಣ.
= ಅನಾದಿ ಅನಂತಕಾಲದಿಂದ ಜ್ಞಾನಿಗಳು ಹೀಗೆ ಹೇಳುತ್ತಬಂದಿದ್ದಾರೆ.
= ಎಂಭತ್ತನಾಲ್ಕು ಲಕ್ಷ ಯೋನಿಗಳನ್ನು ಕಳೆದರೂ ಮಾನವಜನ್ಮ ಲಭಿಸುವದು ಕಠಿಣ.
= ಹೀಗೆ ಭಾರತೀಯ ಪೂರ್ವಜರು ಸಾಧಾರವಾಗಿ ವಿವರಣೆಗಳೊಂದಿಗೆ ಮಾನವಕುಲದ ಸಲುವಾಗಿ ಬರೆದಿಟ್ಟಿದ್ದಾರೆ.
= ಆದರೆ ಇವರ ಅರ್ಥ
= ಸರ್ವಸಾಮಾನ್ಯ ಜನರಿಗೆ ತಿಳಿಯತಕ್ಕಂಥ ಸರಳ ಭಾಷೆಯಲ್ಲಿ
= ಅಷ್ಟೇ ಏಕೆ ದೊಡ್ಡವರನೇಕರಿಗೂ ಸ್ಪಷ್ಟವಾಗುವ ರೀತಿಯಲ್ಲಿ ತಿಳಿಸಿ ರುವದು ಹಾಗೂ ಬಿಂಬಿಸಿರುವದು ನನ್ನ ಲಕ್ಷಕ್ಕಂತೂ ಬಂದಂತಿಲ್ಲ.
= ಮತ್ತೆ, ಈಗ ಎಲ್ಲೆಡೆ ಅನಾಚಾರಗಳೇ ನಡೆದಿರುವದನ್ನು ಕಂಡಾಗ
= ಮಾನವಕುಲಕ್ಕೆ ಇದರರ್ಥವಾಗಿಲ್ಲ ಎಂದೆನಿಸುತ್ತದೆ.

oo oo oo oo

೫. = ಸುದೈವ ವಶಾತ್ ಆಧುನಿಕ ವಿಜ್ಞಾನದಿಂದ ನಡೆದ ಅಪಾರ ಪ್ರಗತಿಯ ಪರಿಣಾಮವಾಗಿ

= ಆಧುನಿಕ ಸಂಶೋಧನೆ ಹಾಗೂ ಶಕ್ತಿಶಾಲಿ ಸಾಧನಗಳ ಮೂಲಕ

= ಮಾನವಜನ್ಮ ದುರ್ಲಭ, ಕಠಿಣವೆಂಬುದೀಗ ಸುಸ್ಪಷ್ಟ

= ಆ ಕಲ್ಪನೆಗೆ ಮತ್ತಷ್ಟು ಸ್ಪಷ್ಟತೆ ಇಷ್ಟೇ ಅಲ್ಲದೇ ಅದನ್ನು ಅರ್ಥ ಮಾಡಿಕೊಳ್ಳುವ ಮಾರ್ಗವೂ ಸುಲಭ,

= ಮನೋವೇಧಕ, ಆಶಾದಾಯಕ ಹಾಗೂ ಅದ್ಭುತರವ್ಯೂ ಆಹುದು

= ಎಂದು ಕಂಡುಬಂದಿದೆ.

= ಆದರೆ ... ... ... ...

oo oo oo oo

೬. = ಎಲ್ಲಿಯ ವರೆಗೆ ಜಗತ್ತಿನಲ್ಲಿಯ ಪ್ರತಿಯೊಬ್ಬ ವ್ಯಕ್ತಿಗೆ ಇದು ತಿಳಿಸಲ್ಪಡುವದಿಲ್ಲವೋ

= ಅಲ್ಲಿಯ ವರೆಗೆ ಮಾನವಕುಲ ಅಧಃಪತನದ ಮಾರ್ಗದಿಂದ

= ಆ ಆಕರ್ಷಣೆ ಹಾಗೂ ಮೋಹಯುತ ಪ್ರಗತಿ ಜಾರುಗುಂಡಿಯಿಂದ

= ಪರಾವೃತ್ತಗೊಳ್ಳುವ

= ಸಾಧ್ಯತೆ ಅಸಂಭವವೆಂದೇ ತಿಳಿಯಬೇಕು.

oo oo oo oo

೭. = ಶತಮಾನ ಶತಕಗಳಿಂದ ನಡೆದು ಬಂದ ಉತ್ಕ್ರಾಂತಿ ಶಾಸ್ತ್ರದ ಅಧ್ಯಯನ ಹಾಗೂ ಸಂಶೋಧನ

= ಒಂದು ಸೂಜಿಯ ಮೊನೆಯಷ್ಟೇ ಸೂಕ್ಷ್ಮಾತಿಸೂಕ್ಷ್ಮವಾದ ಜೀವಕಣದಿಂದ ಉತ್ಪತ್ತಿ ಶಾಸ್ತ್ರ ಆರಂಭವಾಗಿ

= ಕೋಟ್ಯಾನುಕೋಟಿ ಶತಕಗಳ ಮತ್ತು

= ಅನೇಕಾನೇಕ ದೃಶ್ಯ ಹಾಗೂ ಅದೃಶ್ಯ ಶಕ್ತಿಗಳ ಪ್ರಚಂಡ ಕ್ರಿಯೆ ಪ್ರಯೋಗಗಳಿಂದಾಗಿ

= ೬೦೦೦೦ ಅಬ್ಜ ಜೀವಕಣಗಳ ಮನುಷ್ಯ

= ರೂಪುಗೊಂಡುದನ್ನು ಲಕ್ಷಕ್ಕೆ ತಂದುಕೊಂಡರೆ

= ನಮ್ಮ ಜನ್ಮ ಹಾಗೂ ಜೀವನ ಎಷ್ಟೊಂದು ಅತ್ಯಮೌಲ್ಯವೆಂಬುವರ

= ಸಾಧಾರಣ ಕಲ್ಪನೆ ಬರಬಹುದೆಂದೆನಿಸುತ್ತದೆ.

oo oo oo oo

೮. = ಇದಿಷ್ಟೇ ಅಲ್ಲದೇ ಅನುವಂಶಿಕತೆಯ ಶಕ್ತಿ, ಪರಂಪರೆಯ ಪ್ರಭಾವ
= ವಂಶಶಾಸ್ತ್ರ, ಡಿ. ಎನ್. ಎ, ಆರ್. ಎನ್. ಎ, ಸೇಲ್ ಅಥವಾ ಜೀವ ಕಣಗಳ ಕುರಿತು ಬೆಳೆಯುತ್ತಿರುವ ಜ್ಞಾನ ಹಾಗೂ ಕರ್ಮ
= ಇವುಗಳಿಂದಾಗಿ ಸಮಸ್ತ ಚರಾಚರಗಳ ಪ್ರಗತಿ ಶಾಸ್ತ್ರಕ್ಕೆ
= ಒಂದು ವಿಶಿಷ್ಟವಾದ, ದೈದಿಪ್ಯಮಾನ, ಭವ್ಯ,
= ಮತ್ತು ಯಾರಿಗೇ ಆದರೂ ಸಹಜ ರೀತಿಯಲ್ಲಿ ಸುಲಭವಾಗಿ ತಿಳಿಯಲು ಸಾಧ್ಯವಾಗುವಂತೆ ಅರ್ಥವಿವರಣೆ ಮೂಡಿಬಂದಿದೆ.
= ಮತ್ತು ಅತ್ಯಂತ ಶಕ್ತಿಶಾಲಿ ವಿಹಾರ ಜೀವ ಕಣಗಳನ್ನು ಸಹ ತೋರಿಸಬಲ್ಲ ಸೂಕ್ಷ್ಮಾತಿಸೂಕ್ಷ್ಮ ವಸ್ತುಗಳ ದರ್ಶಕಗಳು
= ದರ್ಶನ ಶಕ್ತಿಯನ್ನು ಹತ್ತು ಲಕ್ಷ ಪಟ್ಟು ಹೆಚ್ಚಿಸಿ, ಅದೃಶ್ಯಕ್ಕೆ ದೃಶ್ಯತ್ವ ತಂದುಕೊಟ್ಟು
= ಒಂದು ಪ್ರಚಂಡ ಕ್ರಿಯೆಯನ್ನೇ ಮಾಡಿವೆ
= ಮಾನವಕುಲವು ಶೀಘ್ರಾತಿಶೀಘ್ರವೇ ಸ್ವಂತದ ಸಲುವಾಗಿ ಅದರ ಪ್ರಯೋಜನ ಪಡೆಯಬೇಕು.
= ಅಧಃಪತನದ ಮಾರ್ಗದಲ್ಲಿ ಸಾಗುವದಕ್ಕೆ ತಡೆಹಾಕಲು

oo oo oo oo

೯. = ಮನುಷ್ಯನ ದೇಹದಲ್ಲಿಯ ಕೋಟ್ಯಾಂತರ ಅವಯವಗಳು
= ಅವುಗಳ ಸೂಕ್ಷ್ಮಾತಿಸೂಕ್ಷ್ಮ ರಚನೆ ಹಾಗೂ ಕಾರ್ಯಪದ್ಧತಿ
= ಅದ್ವಿತೀಯವಾದ ಹಾಗೂ ಅನನುಕರಣೀಯ ರೀತಿಯ ಶಕ್ತಿ, ಕೃತಿ ಹಾಗೂ ಅದರ ಅನುಭೂತಿ
= ಇವೆಲ್ಲವುಗಳ ವರ್ಣನೆ ಶಬ್ದಾತೀತ.

oo oo oo oo

೧೦. = ಪ್ರಗಲ್ಭ ವಿಚಾರಶಕ್ತಿಯುಳ್ಳವರಿಗೆ ಇದನ್ನು ತಿಳಿಯುವದು ಕಠಿಣವೇನಲ್ಲ.
= ಆದರೆ ಪ್ರತಿಯೊಬ್ಬರೂ ಇದನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ,
= ಇಂಥ ದೃಷ್ಟಿ ಹೊಂದಿದವರಿಗೆ
= ಅದ್ಭುತ ಚಮತ್ಕಾರಗಳಿಂದ ಕೂಡಿದ,
= ಚಿಕ್ಕದಾಗಿ ಕಾಣುವ ಈ ಅಪಾರವಾದ ವಿಶ್ವದ ಚಿಂತನೆಯಾಗುವುದು
= ಮತ್ತು ಮಾನವನ ಬಗ್ಗೆ ಆದರ ಮೂಡಲಾರಂಭಿಸುವುದು
= ಮಾನವ ಜನ್ಮ ದುರ್ಲಭವೆಂಬುದು
= ಎಷ್ಟೊಂದು ಸತ್ಯವೆಂಬ ಅನುಭವವಾಗಹತ್ತುವುದು.

= ಸರ್ವಸಾಧಾರಣ ವ್ಯಕ್ತಿಗೂ ಇದು ತಿಳಿಯಬೇಕು.
= ಕೋಟ್ಯಾವಧಿ, ಅಬ್ಜಾವಧಿ ರೂಪಾಯಿಗಳ ಗಳಿಕೆ
= ಎಷ್ಟೊಂದು ಕಠಿಣವೆಂಬುದು ಯಾರಿಗೆ ಬಹು ಬೇಗ ಅರ್ಥವಾಗುತ್ತದೆ
= ಅಂಥವರಿಗೆ ಒಂದೊಂದು ಜೀವಕಣ ಎಷ್ಟೊಂದು ದುರ್ಲಭ
= ಎಂಬುದನ್ನು ವಿಚಾರ ಮಾಡು ಎಂದು ಹೇಳಬಹುದು.

೧೧. = ಈ ವಿಚಾರಗಳ ಹಿನ್ನಲೆಯಲ್ಲೀ
= ನಮ್ಮ ಜನ್ಮ ಹಾಗೂ ಆಯುಷ್ಯ
= ಇವುಗಳ ಕುರಿತು ಚಿಂತನೆ ಮಾಡೋಣ

೧೨. = ಗರ್ಭಾವಸ್ಥೆ ಮತ್ತು ತದನಂತರದ ಐಹಿಕ ಆಯುಷ್ಯ
= ಇವುಗಳನ್ನು ಸಾಮಾನ್ಯವಾಗಿ ಏಳು ಹಂತುಗಳೆಂದು ಹಿಡಿಯಬಹುದು.
= ಗರ್ಭ, ಅರ್ಭಕ, ಬಾಲಕ, ಯುವಕ, ತರುಣ, ಪ್ರೌಢ ಹಾಗೂ ವೃದ್ಧ.

೧೩. = ಇನ್ನು ಒಂದು ದೊಡ್ಡ ಚಮತ್ಕಾರ
= ಅದೊಂದು ಅದ್ಭುತ ಶಕ್ತಿಯ ಆವಿಷ್ಕಾರ.
= ಕೋಟ್ಯಾವಧಿ ವರ್ಷಗಳಾಗಿರುವ ಒಂದು ಜೀವಕಣದ ಗರ್ಭಧಾರಣ ದಿಂದ ಹಿಡಿದು ೨೦೦೦೦ ಅಬ್ಜ ಜೀವಕಣಗಳ
= ಏಶುವೊಂದು ಜನ್ಮತಳೆಯುವುದು ಅಗಣಿತ ವರ್ಷಗಳ ಕಾಲಗಳಿಂದ ನಡೆದುಬಂದುದು.
= ಕೇವಲ ಒಂಭತ್ತು ತಿಂಗಳಲ್ಲಿ ಈ ಶಕ್ತಿ ಸಮ್ಮಿಲಿತಗೊಳ್ಳುತ್ತದೆ.
= ಪ್ರತಿಯೊಬ್ಬರೂ ಈ ಚಮತ್ಕಾರವನ್ನು ಮನಃಚಕ್ಷುಗಳ ಮುಂದೆ ತಂದು ತಮ್ಮ ವಿಚಾರಶಕ್ತಿಯನ್ನು
= ಜಾಗ್ರತಗೊಳಿಸಿಕೊಂಡು ಇದರ ವಿವರವಾದ ನೈಜ ಅರ್ಥ ಅರಿತು ಕೊಳ್ಳಬೇಕ.

೧೪. = ಇದಾದ ಬಳಿಕ ಜೀವನದ ಆರು ಹಂತಗಳನ್ನು ಸಂಭಾಳಿಸುವ ಕಾರ್ಯ
= ಅವುಗಳ ಸದುಪಯೋಗ ಮಾಡಿಕೊಳ್ಳುವ ಕೆಲಸ
= ವಿಧಾತಾನಿಂದ ಮಾನವ ಕುಲಕ್ಕೆ ವಹಿಸಲ್ಪಟ್ಟಿದೆ.

= ಕೈಗೊಂದು ಹಗ್ಗ ನೀಡಿ
= ಹೀಗೆ ಹೇಳುವುದು
= ಮನುಷ್ಯನೇ, ಮನಸ್ಸು, ಬುದ್ಧಿ, ಶರೀರ, ಆಯುಷ್ಯ ಮತ್ತು ಈ ಹಗ್ಗವನ್ನು ನಿನಗೆ ಕೊಡಲಾಗಿದೆ
= ಬೇಕಾದರೆ ಅದರ ಪ್ರಯೋಜನ ಪಡೆದು ಮೇಲಕ್ಕೇರು
= ಇಲ್ಲವಾದರೆ ಅದರ ದುರುಪಯೋಗ ಮಾಡಿಕೊಂಡು ಸ್ವತಃ ಕುತ್ತಿಗೆಗೆ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೋ
= ನಿನ್ನ ಶರೀರ, ಮನಸ್ಸು, ಬುದ್ಧಿ ಹಾಗೂ ಆಯುಷ್ಯ
= ಇವುಗಳ ದುರುಪಯೋಗ ಮಾಡಿಕೊಂಡು
= ನರಕವಾಸವೇ ಸುಖವೆಂದು ಭಾವಿಸಿ ಅನುಭವಿಸು.

oo oo oo oo

೧೫. = ಶಿಶು ಹಾಗೂ ಬಾಲಕ ಈ ಎರಡೂ ಅವಸ್ಥೆಗಳು
= ಅಜ್ಞಾನದ ಅವಸ್ಥೆಗಳಾದುದರಿಂದ
= ಪಾಲಕರ ಆಶ್ರಯ ಪಾತ್ರದಲ್ಲೇ ಬೆಳೆಯಬೇಕಾಗುತ್ತದೆ.
= ಯವ್ವನಾವಸ್ಥೆ ಹಾಗೂ ತಾರುಣ್ಯ ಇವೆರಡು ಮಾತ್ರ ಪ್ರತ್ಯೇಕ ರೀತಿಯಲ್ಲಿ ಬೆಳೆಯುತ್ತವೆ.
= ಶಕ್ತಿ, ಬಲ, ತೇಜ ಕರ್ತೃತ್ವಶಕ್ತಿ, ಉತ್ಸಾಹ, ಧೈರ್ಯ, ಸಾಹಸ, ಚೈತನ್ಯ
= ಈ ಗುಣಗಳನ್ನು ಹೆಚ್ಚಿಸಿಕೊಂಡು ಸಮೃದ್ಧರಾಗುತ್ತ ನಡೆಯುವ
= ಐಹಿಕ ಆಯುಷ್ಯದ ಕಾಲವಿದು
= ಆದರೆ ಗರ್ಭದಲ್ಲಿ ಬೆಳೆಯುವ ವೇಗಕ್ಕಿಂತ
= ಎಷ್ಟೋಪ್ಟೋ ರೀತಿಯಲ್ಲಿ ಕಡಿಮೆ ಗತಿಯದು.
= ಗರ್ಭಧಾರಣೆ ಒಂದು ಜೀವಕಣದಿಂದ ಆರಂಭವಾಗಿ
= ಒಂಭತ್ತು ತಿಂಗಳು, ಒಂಭತ್ತು ದಿವಸಗಳಲ್ಲಿ ೨೦೦೦೦ ಅಬ್ಜ ಜೀವಕಣಗಳ
= ಶಿಶುವು ತಯಾರಾಗುತ್ತದೆ.
= ೨೦೦೦೦ ಅಬ್ಜ ಜೀವಕಣಗಳಿಂದ ಆರಂಭವಾಗಿ ಸಾಧಾರಣವಾಗಿ ೬೦೦೦೦ ಅಬ್ಜ ಜೀವಕಣಗಳು
= ವ್ಯವಸ್ಥಿತವಾಗಿ ಬೆಳೆಯಲು
= ಮನುಷ್ಯನಿಗೆ ೨೫ ವರ್ಷ ಹಿಡಿಯುತ್ತವೆ.
= ಇದರ ಮೇಲಿಂದ ಕಲ್ಪನೆಗೆ ಬರಬಹುದು,

೧೬. = ಆದರೆ
= ಈ ಎಲ್ಲ ಶಕ್ತಿಗಳ ಲಾಭವನ್ನು ನಿಜವಾಗಿಯೂ ಪಡೆದುಕೊಳ್ಳಬೇಕಾದರೆ
= ಮನುಷ್ಯನು ಶೀಘ್ರಾತಿಶೀಘ್ರದಲ್ಲೇ ಪ್ರೌಢತ್ವ ಪಡೆಯಬೇಕು.
= ಮತ್ತು ಆ ಪ್ರೌಢತ್ವದ ಅರಿವನ್ನು ಸಾಧ್ಯವಾದಷ್ಟು ದೀರ್ಘಗೊಳಿಸಿ ಕೊಳ್ಳಬೇಕು,
= ನಮ್ಮ ಪೂರ್ವಜರು ಬಹಳಷ್ಟು ವಿವರವಾಗಿ ದೀರ್ಘವಾಗಿ ಯೋಚಿಸಿ
= ಪ್ರೌಢತ್ವದ ಆರಂಭ ಹದಿನಾರನೇ ವಯಸ್ಸಿನಲ್ಲಾಗಬೇಕು
= ಎಂದು ತೀರ್ಮಾನಿಸಿ ಹೇಳಿದ್ದಾರೆ.
= ಮತ್ತು ಹದಿನಾರು ವರ್ಷದಿಂದ ಮುಂದೆ ಹೆಚ್ಚೆಚ್ಚು ಕಾಲ;
= ನೂರು ವರ್ಷ ಅಥವಾ ಅದಕ್ಕೂ ಹೆಚ್ಚು ವರ್ಷ ಬದುಕಿದರೆ
= ವೃದ್ಧಾಪ್ಯದ ಅವಧಿಯನ್ನು ಕಡಿಮೆಗೊಳಿಸಿಕೊಳ್ಳಲು ಅಶಕ್ಯ ವೆನಿಸಕೂಡದು.

೧೭. = ಪ್ರೌಢತ್ವವನ್ನು ಹೊಂದಲು
= ತಾರುಣ್ಯದ ಅವಧಿ ಬಳಿಸಬೇಕಾಗುತ್ತದೆ.
= ಉಪಯುಕ್ತತೆ, ಸಮುಚ್ಚತೆ, ಸಯುಕ್ತತೆ, ಅನುಭವ, ಪರಿಪಕ್ವತೆ ಸಮತೋಲತ್ವ,
= ಮತ್ತು ಪ್ರಗಲ್ಭತೆ ಇವುಗಳ ಸಂಚಯು.
= ಇದರಿಂದಾಗಿ ತರುಣನು ಪ್ರೌಢ ಹಾಗೂ ಕರ್ತೃತ್ವಶಾಲಿಯಾಗುತ್ತಾನೆ.
= ಇವೆಲ್ಲವುಗಳ ಸಂಚಯುವಾಗದೇ ಹೋದರೆ
= ತಾರುಣ್ಯದ ಅವಧಿಯೇ ಹೆಚ್ಚಾಗುವದು.
= ಪ್ರೌಢತ್ವದ ಕಾಲ ಕಮ್ಮಿಯಾಗುವದು.
= ಹೀಗೆ ಅತ್ಯಾವಶ್ಯಕವಾದ ಸದ್ಗುಣಗಳ ಸಂಚಯು ಲಭಿಸದೇ ಹೋದಾಗ.
= ಯುವಕ ಹಾಗೂ ತರುಣ ಜೀವನದಲ್ಲಿಯ ಅಪಕ್ವತೆ ಹಾಗೆಯೇ ಉಳಿದುಬಿಡುವದು.
= ಸಣ್ಣ ದೊಡ್ಡ ತಪ್ಪುಗಳು ಸಂಭವಿಸುತ್ತವೆ.
= ಮತ್ತು ಅದರಿಂದಾಗಿ ಆಗುವ ಸಣ್ಣ ದೊಡ್ಡ ದುಷ್ಪರಿಣಾಮಗಳು.
= ಒಮ್ಮೊಮ್ಮೆ ಭಯಂಕರ ಸ್ವರೂಪವೂ ಸಂಭವಿಸಿ
= ಆತ್ಮಘಾತಕ, ಸಮಾಜಘಾತಕ ಹಾಗೂ ಅಷ್ಟಾಂಗ ಆರೋಗ್ಯ ನಾಶಕಗಳಾಗಿ ಪರಿಣಾಮ ಬೀರುತ್ತವೆ.

೧೮. = ಇಷ್ಟೇ ಅಲ್ಲದೆ
= ವೃದ್ಧತ್ವದಿಂದಾಗಿ
= ದಿನದಿಂದ ದಿನಕ್ಕೆ ಹೆಚ್ಚೆಚ್ಚು ಕಳಾಹೀನರಾಗಿ
= ನಿಸ್ತೇಜ ಹಾಗೂ ನಿರ್ಬಲವಾಗುವ
= ಮನುಷ್ಯನ ಆಯುಷ್ಯದ ಗತಿಯಾಗುವುದರಿಂದ
= ಜೀವನದ ಉತ್ತಮೋತ್ತಮ ಕಾಲ ಪ್ರೌಢತ್ವವೇ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.
= ಮತ್ತು ಅದನ್ನು ಹೆಚ್ಚಿಸಿಕೊಳ್ಳುವದು ಹೆಚ್ಚೆಚ್ಚು ಕಾಳಜೀಪೂರ್ವಕ ಅಭ್ಯಾಸಪೂರ್ವಕ ರೀತಿಯಲ್ಲಿ
= ಕಾಯ್ದುಕೊಳ್ಳುವದೇ
= ಮನುಷ್ಯ ಜೀವನದ ಹಾಗೂ ಮನುಷ್ಯತ್ವದ
= ಸಹಜವೆಂದು ತೋರುವ ಅಲಭ್ಯ ಕೊಡುಗೆಯೆನಿಸುವದು.
= ಅದುವೆ ಉಚ್ಚತಮ ಕರ್ತವ್ಯ ಹಾಗೂ ಸರ್ವೋತ್ತಮ ಸಾರ್ಥಕ್ಯ.

೦೦ ೦೦ ೦೦ ೦೦

೧೯. = ಮನುಷ್ಯನ ಬೆಳವಣಿಗೆ ಮುಖ್ಯವಾಗಿ ನಾಲ್ಕು ವಿಧ.
= ಶಾರೀರಿಕ, ಮಾನಸಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ.

೦೦ ೦೦ ೦೦ ೦೦

೨೦. = ಶಾರೀರಿಕ ಮತ್ತು ಕೆಲ ಪ್ರಮಾಣದಲ್ಲಿ ಮಾನಸಿಕ ಬೆಳವಣಿಗೆಯು
= ವಂಶಪರಂಪರೆ, ಜನನಶಾಸ್ತ್ರ, ಆನುವಂಶಿಕತೆ, ಉತ್ಕ್ರಾಂತಿ ಶಕ್ತಿ
= ಇವುಗಳ ಸಂಬಂಧದ ಬೆಸುಗೆಯು ಹಿನ್ನೆಲೆಯು ಯೋಜನೆಯಂತೆ
= ಕೆಲಮಟ್ಟಿಗೆ ತನ್ನಷ್ಟಕ್ಕೆ ತಾನೇ ನಡೆಯುವದುಂಟು,
= ಅದಕ್ಕೆ ಹೊಸ ಯೋಗ್ಯವಾದ ಸಂಸ್ಕೃತಿ ನೀಡದೇ ಹೋಗುವುದರಿಂದ
= ನಿಸರ್ಗದ ನಿಯಮದಂತೆ ಇತರ ಎಲ್ಲ ಚರಾಚರ ವಸ್ತುಗಳ ರೀತಿಯಲ್ಲಿ
= ಜೀವನ–ಮರಣ ಚಕ್ರದಲ್ಲೇ ತಿರುಗುವುದುಂಟು
= ಆದರೆ ಮನುಷ್ಯನಿಗೆ ಇತರ ಜೀವಗಳಿಗಿಂತ ಭಿನ್ನವಾದ ಶಕ್ತಿಯನ್ನು
= ಜಗನ್ನಿಯಾಮಕನು ನೀಡಿದ್ದಾನೆ.
= ಮನುಷ್ಯನು ತನ್ನ ಬುದ್ಧಿ ಕೌಶಲ್ಯದಿಂದ ಅದನ್ನು ಉಪಯೋಗ ಮಾಡಿಕೊಂಡಿದ್ದಾದರೆ
= ಮನಸ್ಸಿನ ವಿಕಾಸವಾಗುವದು.
= ನರನೇ ನಾರಾಯಣನಾಗಲಿಕ್ಕೆ ಸಾಧ್ಯವಾಗುವುದು.

೨೧. = ತರುಣ ಹಾಗೂ ಯುವಕನನ್ನು ಪ್ರೌಢನನ್ನಾಗಿಸಲು
= ಶಿಕ್ಷಣ ನೀಡಲಾಗುತ್ತಿದೆ.
= ಗೃಹ ಶಿಕ್ಷಣ, ಶಾಲಾ ಶಿಕ್ಷಣ, ಧಾರ್ಮಿಕ ಶಿಕ್ಷಣ, ಸಾಂಸ್ಕೃತಿಕ ಶಿಕ್ಷಣ, ಬೌದ್ಧಿಕ ಶಿಕ್ಷಣ
= ಶಾರೀರಿಕ ಶಿಕ್ಷಣ, ಮಾನಸಿಕ ಶಿಕ್ಷಣ ಮತ್ತು ಆರ್ಥಿಕ ಶಿಕ್ಷಣ ಇತ್ಯಾದಿ, ಇತ್ಯಾದಿ.

oo oo oo oo

೨೨. = ಧ್ಯೇಯಪೂರ್ಣವಿರಲೇ ಬೇಕು
= ಯುವಕರಿಗೆ ಮತ್ತು ತರುಣರಿಗೆ
= ಅಷ್ಟವಿಧ ಆರೋಗ್ಯ ಹಾಗೂ ಅಷ್ಟವಿಧ ಶಿಕ್ಷಣ ಇವುಗಳ ಮಹತ್ವ, ಸುಸ್ಥಿತಿ ಹಾಗೂ ದಕ್ಷತೆ
= ಇವುಗಳ ಮೂಲಕ ಸಾಂಸ್ಕೃತಿಕ ಶಕ್ತಿ ಬೆಳೆಯಿಸಿ
= ಅವರನ್ನು ಶೀಘ್ರಾತಿಶೀಘ್ರವೇ ಪ್ರೌಢರನ್ನಾಗಿಸುವುದಿದೆ.
= ಇಲ್ಲವಾದರೆ ಅವರು ಕೇವಲ ಹೆಚ್ಚಿನ ವಯಸ್ಸಿನವರಾಗಿ ಬಿಟ್ಟು
= ಮಿಕ್ಕೆಲ್ಲ ದೃಷ್ಟಿಯಿಂದ ತರುಣರಾಗಿಯೇ ಉಳಿದುಬಿಡುವುದುಂಟು.
= ಅನಿರ್ಬಂಧ, ಅವಿಶ್ವಾಸಿ ಹಾಗೂ ಅಪಕ್ವರಾಗಿ

oo oo oo oo

೨೩. = ಶಿಕ್ಷಣ, ಶಿಸ್ತು ಮತ್ತು ಪರಿಸರ ಇವುಗಳ ಮೂಲಕ
= ಬೌದ್ಧಿಕ ಮತ್ತು ಸಾಂಸ್ಕೃತಿಕ ಸಂಸ್ಕಾರಗಳ ಸಿಂಚನವಾದರೆ
= ಉತ್ತಮೋತ್ತಮವಾದ "ವಾದ" ಅಥವಾ ತತ್ತ್ವ ಮೈದಳೆಯುತ್ತದೆ.
= ಮತ್ತು ದುಷ್ಟತನದಿಂದ ದುಷ್ಟ ವ್ಯಕ್ತಿಯೇ ಬೆಳೆಯುತ್ತದೆ.

oo oo oo oo

೨೪. = ಬುದ್ಧಿ, ಶರೀರ ಮತ್ತು ಉತ್ಕ್ರಾಂತಿ ಶಕ್ತಿ
= ಇವುಗಳ ಶಾಸ್ತ್ರೀಯ ಜ್ಞಾನವನ್ನವಲಂಬಿಸಿ ಈ ಸಂಸ್ಕಾರಗಳು ಬರುವುದರಿಂದ
= ಅಲೌಕಿಕವಾದ ಬೆಳವಣಿಗೆ, ಪ್ರಗತಿ, ಪ್ರೌಢತ್ವ ಇವುಗಳನ್ನು ಅಪೇಕ್ಷಿಸುವುದಕ್ಕೆ ಆತಂಕವೇನಿಲ್ಲ.
= ಆದರೆ............

oo oo oo oo

೨೫. = ಮಾನವಕುಲದ ದುರ್ದೈವದಿಂದ
= ನಾವಿಂದು ನೋಡುವುದು, ನಡೆಯುವುದು ಹಾಗೂ ಅನುಭವಿಸುವುದು
= ನಿರಾಶೆಗೊಳ್ಳುವದು
= ಅದರ ಒಂದೇ ಒಂದು ಸಾರಾಂಶವೆಂದರೆ
= ತಾರುಣ್ಯದ ಕಾಲಾವಧಿ ಹೆಚ್ಚುತ್ತಲೇ ನಡೆದಿರುವುದು.
= ವೃದ್ಧಾಪ್ಯ ಬೇಗ ಬೇಗನೇ ಸನ್ನಿಹಿತವಾಗತೊಡಗಿದೆ.
= ತತ್ಪರಿಣಾಮವಾಗಿ ಪ್ರೌಢತ್ವದ ಕಾಲಾವಧಿ ಈ ಎರಡೂ ಕಡೆಯಿಂದ ಕತ್ತರಿಸಲ್ಪಟ್ಟು ಕಡಿಮೆಯಾಗುತ್ತ ನಡೆದಿದೆ.
= ೫೫–೬೦ ರಷ್ಟು ವಯಸ್ಸಿಗೆಯೇ ವೃಧಾಪ್ಯ ಪ್ರಾಪ್ತವಾಗುವುದುಂಟು.
= ೫೫ನೇ ವಯಸ್ಸಿನ ವರೆಗೆ ತಾರುಣ್ಯಕ್ಕೇ ಹೆಚ್ಚು ಹಿರಿತನ ಕೊಡಲಾಗುತ್ತದೆ.
= ಆದ್ದರಿಂದ ಪ್ರೌಢತ್ವಕ್ಕೆ ಹತ್ತಿಕ್ಕಲಾಗುತ್ತಿದೆ ಎಂದು ಎನಿಸುವದು.
= ೧೬ನೇ ವಯಸ್ಸಿನಿಂದ ೮೦ ವರ್ಷದ ವರೆಗೆ ಪ್ರೌಢತ್ವ ಬೆಳೆಸುವ ಪ್ರಯತ್ನ ನಡೆಯಬೇಕಿತ್ತು.

oo oo oo oo

೨೬. = ಅದರ ಸಲುವಾಗಿ ನಾವು ನೋಡುತ್ತೇವೆ
= ವಯಸ್ಸು, ಸ್ಥಾನಮಾನ ಹಾಗೂ ಶಾಲೆ ಕಾಲೇಜ ಶಿಕ್ಷಣದಿಂದ
= ಮೇಲ್ಮಟ್ಟಕ್ಕೆ ಏರಿದವರು
= ಪ್ರೌಢರಂತೆ ಕಾಣುವ ನಮ್ಮ ವಯಸ್ಕರು
= ಪ್ರತ್ಯಕ್ಷ ಗುಣಗಳಿಂದ, ವಿಚಾರ ಹಾಗೂ ಆಚಾರಗಳಿಂದ
= ತಾರುಣ್ಯದ ಕಾಲದಲ್ಲಿ ಸಮೃದ್ಧರಾಗಿ ಕಾಣುವದುಂಟು
= ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ತಾರುಣ್ಯದಲ್ಲಿ ಸುಲಭವಾಗಿರುವ ಇವುಗಳನ್ನು ಸ್ವಾಧೀನದಲ್ಲಿರಿಸಿಕೊಂಡು
= ಜಗಳ, ಅಸೂಯೆ, ಅಹಮಹಮಿಕೆ, ಹತ್ಯೆ, ಹೊಡೆದಾಟ,
= ಲೂಟಿ, ದರೋಡೆ, ಯುದ್ಧ, ಮಹಾಯುದ್ಧ, ಮೋಸ, ವಂಚನೆ,
= ಇವುಗಳನ್ನು ಎದುರಿಸಲಿಕ್ಕಾಗಿಯೇ ಶಕ್ತಿ, ಯುಕ್ತಿ, ಬುದ್ಧಿ,
= ಅಷ್ಟಾಂಗ ಆರೋಗ್ಯ ಹಾಗೂ ಅಷ್ಟಾಂಗ ಶಿಕ್ಷಣದ ಉಪಯೋಗ ಮಾಡುವದೇ ತಾರುಣ್ಯ.

oo oo oo oo

೨೭. = ತರುಣರಿಗೆ ಪ್ರೌಢತ್ವ ಪ್ರಾಪ್ತವಾಗುವ ಶಕ್ಯತೆ ದೂರ ದೂರ ಸರಿಯುತ್ತ
= ನಡೆದಿರುವದು ಕಾಣುತ್ತದೆ.
= ಮತ್ತು ಅದರಿಂದಾಗಿ ಇಡೀ ಪ್ರಪಂಚ.
= ಆದರೆ, ನಮ್ಮ ದೃಷ್ಟಿಯಿಂದ ಕನಿಷ್ಟ ನಮ್ಮ ದೇಶವಲ್ಲಾದರೂ
= ೩೬ ವರ್ಷಗಳ ಸ್ವಾತಂತ್ರ್ಯದ ನಂತರವೂ
= ಕೀಳಾದ ಅಪಕ್ವ ಹಾಗೂ ಅವಿಚಾರಿ ಪ್ರವೃತ್ತಿಯವರ ಸಂಖ್ಯೆ
ಬೆಳೆಯುತ್ತಲೇ ಇದೆ.
= ಪಂಡಿತ ಜವಾಹರಲಾಲ ನೆಹರೂ ಅವರ ಶಬ್ದಗಳಲ್ಲಿ ಹೇಳುವ
ದಾದರೆ ನಮ್ಮ ದೇಶವೇನೋ ಬಾಲ್ಯಾವಸ್ಥೆಯದು.
ಅಂದರೆ "ಇನ್‌ಫಂಟ್ ನೇಶನ್."

oo oo oo oo

೨೮. = ಇವರು ಪ್ರೌಢರೂ ಅಲ್ಲ ತರುಣರೂ ಅಲ್ಲ, ಯುವಕರೂ ಅಲ್ಲ.
= ಶಿಶುಗಳಿಗಿಂತಲೂ ಚಿಕ್ಕ ಹಸುಳೆಗಳು
= ಹಸುಳೆಗಳ ದೇಶ.

oo oo oo oo

೨೯. = ಆಗಿನ ಕಾಲದಲ್ಲಿ
= ಪಂಡಿತಜಿಯವರ ಕಾಲದಲ್ಲಿ ಬಾಲ್ಯಾವಸ್ಥೆಯಲ್ಲಿಯ ದೇಶವಿದ್ದೀತು
= ಆದರೆ ಈಗ ತಾರುಣ್ಯದ ಮದದಿಂದ ಉನ್ಮತ್ತತೆ ಬಂದರೂ
= ಪ್ರೌಢತ್ವದಿಂದ ಮಾತ್ರ ತುಂಬಾ ದೂರ
= ವೃದ್ಧತ್ವ ತಲುಪಿದ ಸ್ಥಿತಿಯೂ ಅದಲ್ಲಿ
= ಪ್ರೌಢರ ಪ್ರೌಢತ್ವ ಮನ್ನಿಸಲಾರದ
= ಮತ್ತು ಪ್ರೌಢತ್ವವನ್ನೇ ನಾಮಶೇಷಗೊಳಿಸತಕ್ಕವರು ಉಂಟು.

oo oo oo oo

೩೦. = ಕೌಟುಂಬಿಕ ಕ್ಷೇತ್ರದಲ್ಲಿ, ಸಮಾಜ ಕ್ಷೇತ್ರದಲ್ಲಿ, ಶಾಸನ ಕ್ಷೇತ್ರದಲ್ಲಿ
= ಶಿಕ್ಷಣ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ, ಮಾನವೀಯತೆ ಕ್ಷೇತ್ರದಲ್ಲಿ
= ಮೇಲ್ಮಟ್ಟಕ್ಕೇರಿದ ಅಥವಾ ಏರಿಸಲ್ಪಟ್ಟ ಜನರು
= ದೊಡ್ಡಿಸ್ತನ ಅಹಂಭಾವಗಳಿಂದ ಪರಿಪೂರ್ಣ
= ಮಾನ, ಅಪಮಾನ, ಹಾಗೂ ವ್ಯಸನಾಧೀನರು
= ವಿದ್ಯಾ ವಿವಾದಾಯ, ಧನಂ ಮದಾಯ ಶಕ್ತಿಸ್ತು ಏಷಾಂ
ಪರಪೀಡನಾಯ

= ಎಂಬುದು ವರ್ತಮಾನ ಸ್ಥಿತಿಗೆ ಸುಸಂಗತವೆನಿಸುವಂತೆ ಇದ್ದು

= ಇದರಲ್ಲಿಯೇ ತಮ್ಮ ಹಾಗೂ ಇತರರ ದುರ್ಲಭವಾದ ಹಾಗೂ ಅತ್ಯಮೂಲ್ಯದ ಜೀವನದ ಭಾಗ್ಯವನ್ನು ನಾಶಗೊಳಿಸಿಕೊಳ್ಳುವದುಂಟು.

oo oo oo oo

೩೧. = ಒಂದು ಹಳೆಯ ಭವಿಷ್ಯವಾಣಿಯು ನೆನಪಿಗೆ ಬರುತ್ತಿದೆ.

= ನಿರ್ವೀರ್ಯಾ ಪೃಥಿವಿ ನಿರೋಪಧಿರಸಾ, ನೀಚಾ ಮಹತ್ವಗತಾಃ ।
= ಭೂಪಾಲಾ ನಿಜಕರ್ಮ-ಧರ್ಮ ರಹಿತಾಃ, ವಿಪ್ರಾ ಕುಮಾರ್ಗೇ ರತಾಃ ॥
ಭಾರ್ಯಾ ಭರ್ತೃವಿರೋಧಿನಿ ಪರರತಾ, ಪುತ್ರಾ ಪಿತೃದ್ವೇಷಿಣೋಃ ।
ಹಾ ಕಷ್ಟಂ ಖಲು ವರ್ತತೇ ಕಲಿಯುಗೆ ಧನ್ಯಾ ನರಾ ಯೇಃ ಗತಾಃ ॥

oo oo oo oo

೩೨. = ಕನಿಷ್ಟ ಭಾರತಕ್ಕಾದರೂ ಇಂಥ ಪರಿಸ್ಥಿತಿ ಬರಬಾರದಾಗಿತ್ತು.

= ಆದರೂ ಸಹ ಒಂದು ಆಶೆ

= ಇನ್ನೂ ಎರಡು ಮೂರಾಂಶದಷ್ಟು ಜನರು ಈ ರೋಗಕ್ಕೆ ಬಲಿಯಾಗಿರಲಿಕ್ಕಿಲ್ಲ.

= ಆ ದ ರೆ .... ... ... ....

*You are known by the company you keep*

*You are known by the books you read*

*You are known by the food you eat*

*You are known by the clothes you wear*

*You are known by the children you breed*

## Because

*You are made by the company you keep*

*You are made by the books you read*

*You are made by the clothes you wear*

*You are made by the food you eat*

**So be discreet**

Printed at Adarsha Printery, Hubli and

Published by Karnatak Health Institute Ghataprabha.